

ಮುಟ್ಟು ಎನ್ನಲು ಹಿಂಜರಿಕೆ. ಮುಟ್ಟಿನ ಬಟ್ಟೆ ತೊಳೆದು ಒಣಗಿಸಲು ಹಿಂಜರಿಕೆ. ನಮ್ಮದೇ ಅಂಗಾಂಗಗಳ ಮುಟ್ಟಿಕೊಳ್ಳಲು ಹಿಂಜರಿಕೆ. ಅದರ ಬಗೆಗೆ ಮಾತನಾಡಲೂ ಹಿಂಜರಿಕೆ. ಏನು ಮಾಡುವುದೆಂದು ಕೇಳಲೂ ಹಿಂಜರಿಕೆ. ಹೇಳಿದ್ದನ್ನು ಕೇಳಿಸಿಕೊಳ್ಳಲೂ ಹಿಂಜರಿಕೆ. ಒಟ್ಟಾರೆ ಮುಟ್ಟೆನ್ನುವುದೇ ನಮ್ಮನ್ನು ಮುಟ್ಟಿಸಿಕೊಳ್ಳಬಾರದ ಜೀವಿಗಳನ್ನಾಗಿ ಮಾಡಿದ್ದರಿಂದ ಮುಟ್ಟೆಂಬುದೇ ಹಿಂಜರಿಕೆ.

# ಮುಟ್ಟು ನಿಮಗೆಷ್ಟು ಗೊತ್ತು?

ಸಹಕರಿಸುತ್ತಿಲ್ಲ, ತಿಳಿಸಿ ಹೇಳಿ' ಎಂದು ಅಲವತ್ತುಕೊಂಡ.

ನಂತರ ಗೊತ್ತಾದದ್ದು ಇದು: ಅವಳು ಮದುವೆಯ ದಿನದೊಳಗೆ ಬೇಗ ಮುಟ್ಟು ಬರಲೆಂದು ಗಾಂವ್ಟಿ ಮದ್ದು ಬಳಸಿದ್ದಳು. ಯಾವುದೋ ಕಳ್ಳಿ ಹಾಲು, ಸುಣ್ಣ ಮತ್ತಿತರೆ ಸುಟಿ ವಸ್ತುಗಳನ್ನು ಹತ್ತಿಯಲ್ಲಿಟ್ಟು, ಬಟ್ಟೆಯಲ್ಲಿ ಸುತ್ತಿ ಯೋನಿಯ ಒಳಗಿಟ್ಟಿದ್ದರು. ಒಳಗೆ ಗಾಯವಾಗಿ ರಕ್ತ ಒಸರುವುದನ್ನು ಹೆಣ್ಣುಮಕ್ಕಳು ಮುಟ್ಟೆಂದು ತಿಳಿದು ಮೂರು ದಿನ 'ಕೂತೆದ್ದು' ಶಾಸ್ತ್ರ ಮುಗಿಸುತ್ತಾರೆ. ಅದು ಗರ್ಭಕೋಶದಿಂದ ಬರುವ ರಕ್ತಸ್ರಾವ ಅಲ್ಲದಿದ್ದರೂ 'ಶಾಸ್ತ್ರ' ಮುಗಿದು ಮೈಲಿಗೆ ಕಳೆದಿರುತ್ತದೆ. ಅವಳೂ ಹಾಗೇ ಮಾಡಿದ್ದಳು.

ಹೀಗೆ ಮುಟ್ಟನ್ನು ಬೇಗ ಬರಿಸಿಕೊಂಡಿದ್ದ ಅವಳಿಗೆ ಒಳಗಿನ ಗಾಯ ಮಾಯ್ದಿಲ್ಲ. ಉರಿ, ಸ್ರಾವ ಇನ್ನೂ ನಿಂತಿಲ್ಲ. ಗಂಡನಿಗೆ ಅನುಕೂಲೆಯಾಗಿ ಸಹಕರಿಸುವುದು ಎಂದರೆ ಹೇಗೆ?

***

ಅತಿರಂಜಿತ ಸುಳ್ಳಿನಂತೆ ತೋರುವ ಇಂತಹ ಅಸಂಖ್ಯ ಪ್ರಕರಣಗಳು ಈಗಲೂ ಸಂಭವಿಸುತ್ತಿವೆ. ಚಂದ್ರಮಂಗಳನ ಮೇಲೆಲ್ಲ ಮನುಷ್ಯ ಪಾದ ಊರುವ ಸಮಯ ಬಂದಿದ್ದರೂ ಸಂತಾನೋತ್ಪತ್ತಿಗೆ ಅನಿವಾರ್ಯವಾದ ಮುಟ್ಟಿನ ಬಗೆಗೆ ಲೆಕ್ಕವಿಲ್ಲದಷ್ಟು ತಪ್ಪು ಕಲ್ಪನೆಗಳಿವೆ. 'ಮುಟ್ಟಾದವರು ಅಶುದ್ಧ, ಮೈಲಿಗೆ. ಅಕಸ್ಮಾತ್ ಕುಟುಂಬಸಮೇತ ಯಾತ್ರೆ–ವ್ರತ–ಆಚರಣೆಯ ಸಂದರ್ಭದಲ್ಲಿ ಮುಟ್ಟಾಗಿಬಿಟ್ಟರೆ ದೈವ ಕೋಪಗೊಳ್ಳುತ್ತದೆ. ಶಾಪ ಕೊಡುತ್ತದೆ. ಸ್ರಾವವಿರುವ ಐದು ದಿನಗಳ ಕಾಲ ಹೆಣ್ಣುಗಳು ಉಳಿದವರನ್ನು ಮುಟ್ಟಲು, ಮುಟ್ಟಿಸಿಕೊಳ್ಳಲು ಅನರ್ಹರು. ಮನೆಯೊಳಗೆ, ದೇವರ ನೆಲೆಯ ಸಮೀಪ, ಪವಿತ್ರ ಆಚರಣೆಗಳು ನಡೆಯುವ ಕಡೆ ಅವರು ಬರಬಾರದು. ಮುಟ್ಟಾದಾಗ ಹೆಣ್ಣು ದುಷ್ಟಶಕ್ತಿಯ ಆವಾಸಸ್ಥಾನವಾಗಿರುತ್ತಾಳೆ. ಎಂದೇ ಎಳೆಯ ಮಗುವನ್ನು ಮುಟ್ಟಬಾರದು, ಲೈಂಗಿಕತೆಯಿಂದ ದೂರವಿರಬೇಕು, ಪೂಜೆ–ವ್ರತ ಮೊದಲಾದ ಪವಿತ್ರ ಕಾರ್ಯಗಳನ್ನು ಮಾಡಬಾರದು...' ಹೀಗೇ ಮುಟ್ಟಿನ ಕುರಿತ ಅಸಂಖ್ಯ ನಂಬಿಕೆಗಳು ಚಾಲ್ತಿಯಲ್ಲಿವೆ.

ಬೆವರು, ಕಣ್ಣೀರು, ಮೂತ್ರ, ಸಿಂಬಳಗಳೆಂಬ ಸ್ರಾವಗಳಿಗೆ ಇರದ 'ಅಶುದ್ಧ' ಹಣೆಪಟ್ಟಿ ಮುಟ್ಟಿಗೆ ಹೇಗೆ ಬಂತು? ಯೋಚಿಸಬೇಕಾದ ವಿಷಯ ಅಲ್ಲವೆ?

ಮುಟ್ಟಾದವರಿಗೆ ಮೂರು ದಿನ ವಿರಾಮ ನೀಡಲು ದೂರವಿಡುವ ರೂಢಿ ಚಾಲ್ತಿಗೆ ಬಂತೆಂದು ಅದರ ಸಮರ್ಥಕರು ಹೇಳುತ್ತಾರೆ. ಹಾಗಿದ್ದರೆ ಅದಕ್ಕೆ ಮೈಲಿಗೆ ಎಂದಲ್ಲ, ವಿರಾಮ ಎಂಬ ಒಳ್ಳೆಯ ಹೆಸರು ಕೊಡಬಹುದಿತ್ತು. ಹೆಣ್ಣುಗಳು ಅವರವರ ಮನೆಯೊಳಗೆ, ಅವರವರ ಹಾಸಿಗೆ ಮೇಲೇ ಮಲಗಿ ವಿರಾಮ ತೆಗೆದುಕೊಳ್ಳಬಹುದಿತ್ತು. ಮನೆಯ ಹೊರಗೆ, ಹೊರಜಗುಲಿಯಲ್ಲಿ, ಊರ ಹೊರಗೆ ಇರಿ ಎನ್ನುವುದು ವಿರಾಮದ ಮಾತಲ್ಲ. ಅಲ್ಲದೆ ಹೊರಕೂತ ಹೆಣ್ಣುಮಕ್ಕಳು ಮೂರು ದಿನ ಖಂಡಿತಾ ಆರಾಮ ಮಾಡುವುದಿಲ್ಲ. ಮನೆಯೊಳಗಿನ ಕೆಲಸಕ್ಕೆ ವಿರಾಮ ಇದೆಯೆಂದು ಹೊರಗಿನ ಎಲ್ಲ ಕೆಲಸವನ್ನೂ ಮೈಮೇಲೆಳೆದುಕೊಳ್ಳುತ್ತಾರೆ. ಗ್ರಾಮೀಣ ಭಾಗಗಳಲ್ಲಂತೂ ಮುಟ್ಟಾಗಿರುವವರ ದಂಡು ಕಟ್ಟಿಗೆ, ಸೊಪ್ಪು, ಅರಣ್ಯ ಉತ್ಪನ್ನ ತರಲು ಕಾಡು, ಬಯಲು, ಗುಡ್ಡಗಳ ಕಡೆಗೆ ಗುಂಪಾಗಿ ಹೊರಡುತ್ತದೆ. ಆಸ್ಪತ್ರೆ, ಬ್ಯಾಂಕು, ಕಾರ್ಖಾನೆ, ಶಾಲೆ ಕಾಲೇಜು, ಕಚೇರಿ, ಕೂಲಿಕೆಲಸ ಮೊದಲಾದ ಶ್ರಮ, ಸೇವೆ ಬಯಸುವ ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣುಮಕ್ಕಳಿಗೆ ಪ್ರತಿ ತಿಂಗಳೂ ಮೂರು ದಿನ ಮುಟ್ಟಿನ ವಿರಾಮಕ್ಕೆ ರಜೆಯಿರುವುದಿಲ್ಲ. ಬೃಹತ್ ಕೈಗಾರಿಕೆಗಳಲ್ಲಿ ಬಿಡಿ – ಗಾರ್ಮೆಂಟು, ನೀರಿನ ಬಾಟಲಿ, ಉಪ್ಪಿನಕಾಯಿ, ಹಪ್ಪಳ, ದೇವರ ಪ್ರಸಾದ ತಯಾರಿಸುವ ಸಣ್ಣ ಕಾರ್ಖಾನೆಗಳಲ್ಲಿ, ಹೋಟೆಲು–ಹಾಸ್ಟೆಲು–ಶಾಲೆಗಳ ಬಿಸಿಯೂಟ ತಯಾರಿಸುವಲ್ಲಿಯೂ ಹೆಂಗಸರಿಗೆ ಮೂರು ದಿನ ಮುಟ್ಟಿನ ವಿರಾಮಕ್ಕೆ ರಜವಿಲ್ಲ. ಸಾರ್ವಜನಿಕ ಶ್ರಮದಾನಕ್ಕೆ, ಪುಕ್ಕಟೆ ಕೆಲಸಕ್ಕೆ, ತಳಹಂತದ ಕಡಿಮೆ ಸಂಬಳದ ಶ್ರಮಕ್ಕೆ ಮುಟ್ಟು ಅಶುದ್ಧವಲ್ಲ. ಧಾರ್ಮಿಕ ಅವಕಾಶದ ವಿಷಯ ಬಂದರೆ, ಹೆಣ್ಣಿನ ಖಾಸಗಿ ಲೋಕವಾದ ಮನೆ–ದೇವಾಲಯಗಳಲ್ಲಿ ಮಾತ್ರ ಮುಟ್ಟಿನ ಅವಧಿ ಅಪವಿತ್ರ!

ಇಂಥ ದ್ವಂದ್ವ, ತಪ್ಪು ಕಲ್ಪನೆಗಳ ಕಾರಣದಿಂದಲೇ ಹೆಣ್ಣುಮಕ್ಕಳು